ಕರ್ನಾಟಕ ಭೂ ಕಂದಾಯ ೧೯೬೬ನೇ ಇಸವಿಯ, ಖುಷ್ಕಿ ತರೀ ಮತ್ತು ಬಾಗಾಯತು ಕಂದಾಯವನ್ನು ಬೆಳೆದ ಬೆಳೆಗಳ ಅನುಗುಣವಾಗಿ ಕಂದಾಯ ವಸೂಲಿ ಮಾಡಲಾಗುತ್ತಿದೆ. ಈ ಕಾಯ್ದೆ ಜಾರಿಗೆ ಬರುವ ಮೊದಲು ತರೀ ಕಂದಾಯವನ್ನು ಎಲ್ಲಾ ತರದ ಬೆಳೆಗಳ ಮೇಲೆ ವಿಧಿಸಲಾಗುತ್ತಿತ್ತು. ಕರ್ನಾಟಕ ನೀರಾವರಿ ಕಾಯ್ದೆ ಜಾರಿಗೆ ಬಂದ ಮೇಲೆ ಸರ್ಕಾರಿ ಬಾಬತ್ತಿನಿಂದ ಅಂದರೆ ಸರ್ಕಾರಿ ಕೆರೆಯಿಂದ ನೀರಾವರಿ ಆಗತಕ್ಕಂಥ ಭೂಮಿಗೆ ಖುಷ್ಕಿ ಕಂದಾಯ ಮತ್ತು ನೀರಿನ ತೆರಿಗೆ (water rate) ವಿಧಿಸಲಾಗುತ್ತಿದೆ. ಆದರೆ ತಮ್ಮದೇ ಆದ ಬಾವಿಯಿಂದ ನೀರಾವರಿ ಮಾಡಿ ಬೆಳೆದ ಬೆಳೆಗಳ ಮೇಲೆ ತರಿ ಕಂದಾಯ ವಸೂಲು ಮಾಡಲಾಗುತ್ತಿದೆ. ಇದು ಬಹಳ ವರ್ಷಗಳಿಂದಲೂ ಚಾಲ್ತಿಯಲ್ಲಿದೆ. ಕಾರಣ ಕಂದಾಯ ಅಧಿಕಾರಿಗಳು ತರೀ ಕಂದಾಯವನ್ನು ವಸೂಲು ಮಾಡುತ್ತಿದ್ದರೆ ಅದು ಕಾಯ್ದೆ ಬಾಹಿರವಲ್ಲ,

ಕೋಲಾರ ಜಿಲ್ಲಾಧಿಕಾರಿಗಳನ್ನು ವಿಚಾರಿಸಲಾಗಿ ತರೀ ಕಂದಾಯ ವಸೂಲಾತಿಯಲ್ಲಿ ಯಾವುದೇ ಕಠಿಣಾತ್ಮಕವಾದ, ಅಥವಾ ರೈತರಿಗೆ ತೊಂದರೆದಾಯಕವಾದ ಕ್ರಮವನ್ನು ಮುಳಬಾಗಿಲು ತಹಸೀಲ್ದಾರರು ತೆಗೆದುಕೊಂಡಿಲ್ಲವೆಂದು ತಿಳಿದು ಬರುತ್ತದೆ ಇದರ ಜೊತೆಗೆ ನೀರಿನ ತೆರಿಗೆಯನ್ನು ಹಾಕುವ ಬಗ್ಗೆ ಒಟ್ಟಾರೆ ಒಂದು ಕನ್ವಾಲಿಡೇಟೆಡ್ ವಾಟರ್ ರೇಟ್ (ಕನ್ವಾಲಿಡೇಟೆಡ್ ವೆಟ್ ಅಸಸ್‌ಮೆಂಟ್) ಏನು ಇರಬೇಕೆಂಬ ವಿಚಾರದಲ್ಲಿ ಹಿಂದಿನ ಸರ್ಕಾರ ೧೯೮೩ನೇ ಇಸವಿಯಲ್ಲಿ ಮಂತ್ರಿಮಂಡಲದ ಸಮಿತಿಯನ್ನು ನೇಮಿಸಿದ್ದರು. ಆ ಸಮಿತಿಯವರು ಏಪ್ರಿಲ್ ತಿಂಗಳಲ್ಲಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿರತಕ್ಕ ನೀರಾವರಿ ತೆರಿಗೆ ಯಾವ ರೀತಿ ಇರಬೇಕು ? ಭೂ ಕಂದಾಯ ಯಾವ ರೀತಿ ಇರಬೇಕೆಂಬುದರ ವರದಿ ಮಂತ್ರಿಮಂಡಲದ ಮುಂದಿದೆ. ಆ ಬಗ್ಗೆ ಸರ್ಕಾರ ಬೇಗನೆ ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಇದರ ಮಧ್ಯೆ ಕೆಲವು ಸಲಹೆಗಳೂ ಕೂಡ ಬಂದಿವೆ. ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಣಯವನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ನೀರಿನ ಕಂದಾಯ ಹಾಕಬೇಕಾದರೆ ನೀರನ್ನು ಬೇಸಾಯ ಮಾಡುವುದಕ್ಕೆ ಕೊಡಬೇಕು. ನೀರನ್ನೂ ಬೇಸಾಯಕ್ಕೆ ಕೊಡುವುದಿಲ್ಲ, ಮತ್ತು ಆ ಕೆರೆಗಳಲ್ಲಿ ನೀರೂ ಕೂಡ ಇಲ್ಲ. ನೀರು ಇಲ್ಲದಿದ್ದರೂ ಕೂಡ ಕಂದಾಯವನ್ನು ಹಾಕುತ್ತಿದ್ದಾರೆ. ಇರತಕ್ಕಂಥ ೪೨೮ ಕೆರೆಗಳಲ್ಲಿ ೪೨೫ರಲ್ಲೂ ನೀರು ಇಲ್ಲ. ಅವುಗಳಲ್ಲಿ ಕಂಟಿಗಳು, ೧೫ ದಿವಸ ಕೂಡ ನೀರು ಇರುವುದಿಲ್ಲ ಕಾನೂನಿನಲಿ ಕ್ಲಿಯರ್ ಆಗಿ ಇದೆ. ಎಲ್ಲಿ ನೀರನ್ನು ಬೇಸಾಯಕ್ಕೆ ಸಪ್ಲೈ ಮಾಡಲಾಗಿದೆಯೋ, ಆಲ್ಲಿ ತಹಸೀಲ್ದಾರ್ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಜಂಟಿಯಾಗಿ ತಪಾಸಣೆ ಮಾಡಿ ಪ್ರಮಾಣ ಪತ್ರವನ್ನು ಕೊಟ್ಟಮೇಲೆ ನೀರಿನ ತೆರಿಗೆಯನ್ನು ಹಾಕಬೇಕು. ಆದರೆ ಆ ರೀತಿಯ ನೋಟೀಸ್ ಇಲ್ಲ. ಏನೂ ಇಲ್ಲ ಆದರೂ ನೀರಿನ ತೆರಿಗೆಯನ್ನು ಬಲಾತ್ಕಾರವಾಗಿ ವಸೂಲಿ ಮಾಡುತ್ತಿದ್ದಾರೆ. ಊರಿನಲ್ಲೆಲ್ಲಾ ಟಾಂಟಾಂ ಹೊಡೆಸಿ ವಸೂಲಿ ಮಾಡುತ್ತಿದ್ದಾರೆ. ಈ ರೀತಿಯ ನೀರಿನ ತೆರಿಗೆಯನ್ನು ವಸೂಲು ಮಾಡಬೇಕಾದರೂ ಅನುಸರಿಸಬೇಕಾದ ನೀತಿ ಇರಿಗೇಷನ್ ಲೆವಿ ಆನ್ ಕಾಂಟ್ರಿಬ್ಯೂಷನ್ ಅಂಡ್ ವಾಟರ್ ರೇಟ್ ಆಕ್ಟ್ ೧೯೫೭ರ ಎಕ್ಸ್‌ಪ್ಲನೇಷನ್‌ನಲ್ಲಿ ಕ್ಲಿಯರ್ ಆಗಿ ಹೇಳಿದ್ದಾರೆ. ಮತ್ತೆ ಅಂದಾಜು ಸಮಿತಿಯವರೂ ಕೂಡ ೨೭-೩-೧೯೬೮ರಲ್ಲಿ ಆ ಬಗ್ಗೆ ಕ್ಲಿಯರ್ ಆಗಿ ಹೇಳಿದ್ದಾರೆ. ೮ ಲಕ್ಷ ಹೆಕ್ಟೇರ್‌ಗಳಲ್ಲಿ ಒಂದೂವರೆ ಲಕ್ಷ ಎಕರೆ ನೀರಾವರಿ ಪ್ರದೇಶ ಡೀಫಂಕ್ಟ್ ಆಗಿದ್ದರೂ ಮತ್ತು ರೈತರು ಬೇಸಾಯಕ್ಕೆ ನೀರನ್ನು ತೆಗೆದುಕೊಳ್ಳದಿದ್ದರೂ ರೈತರೂ ನೀರಿನ ಕಂದಾಯವನ್ನು ಕೊಡಬೇಕಾಗಿದೆ. ಆದುದರಿಂದ ನೀರಿನ ತೆರಿಗೆಯನ್ನು ಸಧ್ಯಕ್ಕೆ ಸಸ್ಪೆಂಡ್ ಮಾಡಬೇಕು ನಮ್ಮಲ್ಲಿ ಬರಗಾಲ ಇದ್ದರೂ ಟಾಂ ಟಾಂ ಹೊಡೆದು ತೆರಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಇದನ್ನು ತಕ್ಷಣ ನಿಲ್ಲಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲೆಲ್ಲಿ ನೀರು ಕೊಟ್ಟಿಲ್ಲ ಅಥವಾ ನೀರು ಬಂಟ್ಟಿಲ್ಲ ಅಂಥ ಕಡೆ ತೆರಿಗೆ ವಸೂಲ್ಮಾಡದಂತೆ ಕೂಡಲೇ ಆದೇಶ ಕೊಡುತ್ತೇನೆ. ನೀರು ಕೊಡದೆ ಇದ್ದರೆ ತೆರಿಗೆ ವಸೂಲ್ಮಾಡಕೂಡದೆಂದು ಆದೇಶ ಕೂಡ ಇದೆ. ಎಲ್ಲಿ ಆ ರೀತಿ ಕಾನೂನು ಬಾಹಿರವಾಗಿ ವಸೂಲ್ಮಾಡುತಿದ್ದಾರೆಂಬುದು ಖಚಿತವಾಗಿದ್ದರೆ ಅಂಥದನ್ನು ಬರೆದು ಕೊಡಿ. ಆಲ್ಲಿಗೆ ಸೂಚನೆ ಕೊಡುತ್ತೇನೆ.

(೨) ಗುಲ್ಬರ್ಗ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಹಟ್ಟಿಗುಣಿ ಗ್ರಾಮದಲ್ಲಿ ಸಂಭವಿಸಿದ ಬೆಂಕಿ ಆಕಸ್ಮಿಕದಿಂದ ಉಂಟಾದ ನಷ್ಟದ ಬಗ್ಗೆ

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಗುಲ್ಬರ್ಗಾ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಹಟ್ಟಿಗುಣಿ ಗ್ರಾಮದಲ್ಲಿ ಸಂಭವಿಸಿದ ಆಕಸ್ಮಿಕ ಬೆಂಕಿ ಅನಾಹುತದಿಂದ ೪೦ ಗುಡಿಸಲುಗಳು ಸುಟ್ಟು ಸುಮಾರು ೪-೫ ಲಕ್ಷ ರೂಪಾಯಿಗಳ ನಷ್ಟ ಉಂಟಾಗಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್ ಬೊಮ್ಮಾಯಿ (ಕಂದಾಯ ಸಚಿವರು)—ಮಾನ್ಯ ಅಧ್ಯಕ್ಷರೇ ನಾನು ಈ ಕೆಳಗಿನ ಹೇಳಿಕೆಯನ್ನು ಕೊಡಬಯಸುತ್ತೇನೆ.

ಗುಲ್ಬರ್ಗಾ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಹಟ್ಟಿಗುಣಿ ಗ್ರಾಮದಲ್ಲಿ ದಿನಾಂಕ ೧೬-೩-೧೯೮೫ ರಂದು ಆಕಸ್ಮಿಕ ಬೆಂಕಿ ಅಪಘಾತವಾಯಿತು. ಈ ಅನಾಹುತದಲ್ಲಿ ಒಟ್ಟು ೩೩ ಜನರು ನೊಂದಿರುವರು ಯಾವ ಪ್ರಾಣ ಹಾನಿಯೂ ಉಂಟಾಗಿರುವುದಿಲ್ಲ ಕಂದಾಯ ಇಲಾಖೆಯ ಅಧಿಕಾರಿಗಳು ನೊಂದ ಸಂತ್ರಸ್ಥರಿಗೆ ತಕ್ಷಣವೇ ಊಟ ಮತ್ತು ವಸತಿ ಸೌಕರ್ಯಗಳನ್ನು ಒದಗಿಸಿ ಕೊಟ್ಟಿರುವರು. ಈ ಅನಾಹುತದಲ್ಲಿ ನೊಂದವರಿಗೆ ಸಹಾಯ ಒದಗಿಸುವ ಕಾರ್ಯದಲ್ಲಿ ಸಾರ್ವಜನಿಕರಿಂದ ಸಹಕಾರ ಪಡೆಯಲಾಯಿತು. ೩೦ ನೊಂದ ಸಂತಸ್ಥರಿಗೆ ನಗದು ರೂಪದಲ್ಲಿ ತಲಾ ರೂಪಾಯಿ ೩೦೦ರಂತೆ ಇಬ್ಬರು ನೊಂದ ಸಂತ್ರಸ್ಥರಿಗೆ ರೂಪಾಯಿ ೧೫೦ ರಂತೆ ಮತ್ತು ಒಬ್ಬ ನೊಂದ ವ್ಯಕ್ತಿ ರೂಪ್ಪಾಯಿ ೧೦೦ರಂತೆ ನೊಂದ ಎಲ್ಲರಿಗೂ ಪರಿಹಾರ ಧನ ಕೊಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಟ್ಟಿಗುಣಿ ಗ್ರಾಮದಲ್ಲಿ ಪ್ರತಿಯೊಂದು ಸಾರಿ ಇದೇ ರೀತಿ ಆಗುತ್ತಿದೆ. ಆ ಬಗ್ಗೆ ತಮಗೂ ಫೋನ್ ಮಾಡಿ ಹೇಳಿದೆ. ಅಲ್ಲಿ ೧೦೦ ಗುಡಿಸಲುಗಳಿವೆ. ಅವರಿಗೆಲ್ಲಾ ರೂರಲ್ ಹೌಸಿಂಗ್ ಸ್ಕೀಂನಲ್ಲಿ ಹಂತ ಹಂತವಾಗಿ ೨೫-೨೫ರಂತೆ ಮನೆಗಳನ್ನು ಕಟ್ಟಿ ಕೊಟ್ಟರೆ ಅವರ ಸಮಸ್ಯೆ ಬಗೆಹರಿಯುತ್ತದೆಂಬ ವಿಚಾರವನ್ನು ಕೂಡ ತಮ್ಮ ಗಮನಕ್ಕೆ ತಂದಿದ್ದೇನೆ. ದಯವಿಟ್ಟು ಈ ವರ್ಷ ೫೦ ಮನೆಗಳ ನಿರ್ಮಾಣ ಕಾರ್ಯವನ್ನಾದರೂ ತೆಗೆದುಕೊಂಡು ಆ ಜನರಿಗೆ ಸಹಾಯ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಕೆಲವೊಂದು ಮನೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಿಯಮಾವಳಿ 334ರ ಮೇರೆಗೆ ಚರ್ಚೆ

ಗುಳೇದಗುಡ್ಡ ನಗರಕ್ಕೆ ಕುಡಿಯುವ ನೀರಿನ ಸರಬರಾಜು.

ಶ್ರೀ ನಂಜುಂಡಯ್ಯನ ಮಠ್.—ನಮ್ಮ ಗುಳೇದಗುಡ್ಡ ನಗರಕ್ಕೆ ಮಲಪ್ರಭ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದರು. ಅದು ಈಗ ಸಂಪೂರ್ಣವಾಗಿ ಬತ್ತಿಹೋಗಿದೆ. ಅದರ ಆಶ್ರಯದಲ್ಲಿ ೪೦೦ ಎಕರೆ ಶೇಂಗಾ ಬೆಳೆದುಕೊಂಡು ಇವತ್ತು ತುಂಬಾ ತೊಂದರೆಗೊಳಗಾಗಿದ್ದಾರೆ. ಆದುದರಿಂದ ಅವರಿಗೆ ನವಿಲು ತೀರ್ಥದಿಂದ ನೀರು ಬಿಟ್ಟರೆ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುತ್ತದೆ. ದಯವಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಏನು ರೂಲ್ ೩೩೪ರ ಕೆಳಗೆ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ ಆ ವಿಷಯದಲ್ಲಿ ಪರಿಶೀಲನೆ ಮಾಡಿದ್ದೇವೆ. ಆದರೆ ಆ ಪ್ರಕಾರ ನೀರು ಕೊಡಲಿಕ್ಕೆ ಸಾಧ್ಯವಿಲ್ಲ. ನವಿಲು ತೀರ್ಥದಿಂದ ನೀರನ್ನು ಕೊಡುವ ಮೂಲಕ ೪೦೦ ಎಕರೆ ಜಮೀನಿನಲ್ಲಿ ರೈತರು ಏನು ಶೇಂಗಾ ಬೆಳೆಯನ್ನು ಬೆಳೆದಿದ್ದಾರೆ ಅದನ್ನು ಉಳಿಸಿಕೊಡಬೇಕೆಂದು ಹೇಳಿದ್ದಾರೆ. ನವಿಲು ತೀರ್ಥದಲ್ಲಿ ಕೂಡ ಸಾಕಷ್ಟು ನೀರು ಇಲ್ಲ. ಅದರ ಹಿಂಬಾಗದಲ್ಲಿರತಕ್ಕ ಕಮ್ಯಾಂಡ್ ಏರಿಯಾಕ್ಕೆ ನೀರು ಕೊಡುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿ ಇರುವುದರಿಂದ ಬೇರೆ ಕಡೆಗೆ ನೀರು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಮಾನ್ಯ ಸದಸ್ಯರು ನನ್ನ ಛೇಂಬರಿಗೆ ಬಂದು ಕೂಡ ಚರ್ಚೆ ಮಾಡಿದ್ದಾರೆ. ಅವರಿಗೆ ನಾನು ವಿಷಯವನ್ನು ತಿಳಿಸಿದ್ದೇನೆ.